ವಿಷಯ : ಉಡುಪಿ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯಗಳು

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೨೦೪ (೭೦೪)

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯ ಕೇಂದ್ರಗಳು ಮತ್ತು ಜಾನುವಾರು ಆಸ್ಪತ್ರೆಗಳು ಎಷ್ಟು ? (ಸ್ಥಳದ ಹೆಸರಿನೊಂದಿಗೆ ವಿವರ ನೀಡುವದು).

ಆ) ಈ ರೀತಿಯ ಪಶು ಚಿಕಿತ್ಸಾಲಯಗಳು ವಿರಳವಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಮುಂಬರುವ ಸಾಲಿನಲ್ಲಿ ಪ್ರತಿ ಮಂಡಲಕ್ಕೊಂದು ಈ ರೀತಿಯ ಪಶು ಚಿಕಿತ್ಸಾಲಯಗಳ ಸ್ಥಾಪನೆಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಹಾಗೂ ಪಶು ಸಂಗೋಪನೆ ಸಚಿವರು) :

ಅ) ಪಶು ಚಿಕಿತ್ಸಾಲಯಗಳು — ೬

೧) ಪಶು ಚಿಕಿತ್ಸಾಲಯ, ಉಡುಪಿ
೨) – ,, – ಕೋಟ
೩) – ,, – ಬ್ರಹ್ಮಾವರ
೪) – , – ಕಾಪು
೫) – ,, – ಮಣಿಪಾಲ
೬) – ,, – ಹಿರಿಯಡ್ಕ

ಗ್ರಾಮೀಣ ಪಶು ಚಿಕಿತ್ಸಾಲಯಗಳು — ೧೩

೧) ಗ್ರಾಮೀಣ ಪಶು ಚಿಕಿತ್ಸಾಲಯ, ಹೆಗ್ಗುಂಜೆ
೨) – , – ಅಡ್ಯಾರ್
೩) – ,, – ಕಲ್ಯಾಣಪುರ
೪) – , – ಶಿರ್ವ
೫) – ,, – ಕುಕ್ಕೇನಹಳ್ಳಿ
೬) – ,, – ಕೋಟೆ
೭) – ,, – ಮಲ್ಪೆ
೮) – ,, – ಪಡುಬಿದ್ರೆ
೯) – , – ಪಲಿಮಾರು
೧೦) – , – ಮಣಿಪುರ

೧೧) – ,, – ಉದ್ಯಾವರ
೧೨) – ,, – ಹಿಲಿಯಾಣ
೧೩) – ,, – ಕೊಕ್ಕರ್ಣೆ
ಕೃತಕ ಗರ್ಭಧಾರಣ ಉಪ ಕೇಂದ್ರ – ೧
೧) ಕೃತಕ ಗರ್ಭಧಾರಣಾ ಉಪಕೇಂದ್ರ, ಉಡುಪಿ.

ಉಡುಪಿ ತಾಲ್ಲೂಕಿನಲ್ಲಿ ಒಟ್ಟು ೨೦ ವಿವಿಧ ರೀತಿಯ ಪಶು ವೈದ್ಯಕೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ.

ಅ) ಬಂದಿದೆ

ಇ) ಪರಿಶೀಲಿಸಲಾಗುವುದು

ಶ್ರೀ ಪಿ. ಬಸವರಾಜ್ : ಉಡುಪಿ ತಾಲ್ಲೂಕಿನಲ್ಲಿರುವ ಪಶು ಚಿಕಿತ್ಸಾಲಯ ೬ ಮತ್ತು ಗ್ರಾಮೀಣ ಪಶು ಚಿಕಿತ್ಸಾಲಯ ೧೩ ಈ ಎರಡೂ ಒಟ್ಟಿಗೆ ಸೇರಿ ೨೦ ಪಾನುವಾರುಗಳ ಆಸ್ಪತ್ರೆಗಳು ಈ ತಾಲ್ಲೂಕಿನಲ್ಲಿವೆ ಎಂದು ಉತ್ತರ ಕೊಟ್ಟಿದ್ದಾರೆ. ೩೨ ಮಂಡಲ ಪಂಚಾಯತಿ ೨ ಮುನಿಸಿಪಾಲಿಟಿ ಇರುವ ಈ ತಾಲ್ಲೂಕಿನಲ್ಲಿ ಈ ಆಸ್ಪತ್ರೆಗಳ ಸಂಖ್ಯೆ ಏನು ಇದೆ ಇದು ಬಹಳ ಕಡಿಮೆಯಾಗಿದೆ ಮತ್ತು ಇದರಿಂದಾಗಿ ಜನರಿಗೆ ತೊಂದರೆಯಾಗಿದೆ. ಇದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಬಂದಿದೆ ಎಂದು ಹೇಳಿದ್ದಾರೆ. ಸರಕಾರದ ಗಮನಕ್ಕೆ ಬಂದ ಮೇಲೆ ಸಾರ್ವಜನಿಕರಿಗೆ ಆದ ತೊಂದರೆಯ ಬಗ್ಗೆ ಯಾವ ಪರಿಹಾರವನ್ನು ಸರಕಾರ ಸೂಚಿಸುತ್ತದೆ ?

ಶ್ರೀ ಬಿ. ಬಸವಲಿಂಗಪ್ಪ : ಈ ತಾಲ್ಲೂಕಿನಲ್ಲಿ ಸುಮಾರು ೨,೦೦೧೫೫ ರಾಸು ಗಳು ಇವೆ. ಪಶು ಸಂಗೋಪನಾ ಇಲಾಖೆಯನ್ನು ನಾನು ರೀ ಆರ್ಗನೈಸೇಷನ್ ಮಾಡಿದ್ದೇನೆ. ಅದರ ಪ್ರಕಾರ ಈ ಎಲ್ಲಾ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಈ ರೀ ಆರ್ಗನೈಸೇಷನ್ ಜಾರಿಗೆ ಬರುತ್ತದೆ. ಅವಶ್ಯಕತೆಯ ಆಧಾರದ ಮೇಲೆ ಆಸ್ಪತ್ರೆಯನ್ನು ಪ್ರಾರಂಭ ಮಾಡಬೇಕೆಂದು ಡಿಸ್ಪೆನ್ಸರಿಯನ್ನು ಮಾಡಬೇಕೆಂದಿದ್ದೇವೆ. ಅದರ ಬಗ್ಗೆ ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಪಿ ಬಸವರಾಜ್ : ಸಂಚಾರಿ ಪಶು ಆಸ್ಪತ್ರೆ ಇದೆ ಅದರೆ ಇದು ಕಳೆದ ೩ ತಿಂಗಳಿನಿಂದ ಕಾರ್ಯಾಚರಣೆಯಲ್ಲಿಲ್ಲ. ಇದನ್ನು ಕಾರ್ಯಾಚರಣೆ ಮಾಡುವಲ್ಲಿ ಸರಕಾರ ಸೂಕ್ತ ಗಮನ ಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ಕೇಳಿ ಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಆಗಬಹುದು

ಅಧ್ಯಕ್ಷರು : ಮಾನ್ಯ ಶಿವರಾಮ್‌ರವರ ಪ್ರಶ್ನೆ ನಂಬರ್ ೨೦೫(೬೨೧) ಕ್ಕೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ಬಿ. ಶಿವರಾಮ್ : ನನ್ನ ಮೂರು ಪ್ರಶ್ನೆಗೆ ಉತ್ತರ ಬರಲಿಲ್ಲ. ಹೋದ ಸಾರಿ ತಾವು ಏನು ಡೆಫರ್ ಮಾಡಿದಿರಿ, ಕ್ಯಾರೀಡ್ ಓವರ್ ಮಾಡಿದ್ದೀರಿ. ಅದಕ್ಕೂ ಕೂಡ ಉತ್ತರ ಬಂದಿಲ್ಲ. ಹೀಗಾದರೆ ನಾವು ಈ ಸದನದಲ್ಲಿ ಏತಕ್ಕೆ ಪ್ರಶ್ನೆ ಕೇಳ ಬೇಕೆಂಬ ಭಾವನೆ ನಮಗೆ ಬಂದಿದೆ ಪ್ರೊಫೆಸರ್‌ರವರು ಹೇಳಿದಂತೆ ಲಕ್ಷ ಕೋಟಿ ರೂಪಾಯಿಗಳನ್ನು ರೋಜ್‌ಗಾರ್ ಯೋಜನೆಯಲ್ಲಿ ಖರ್ಚು ಮಾಡಿಲ್ಲ. ಳಂಜ ತಿಂಗಳಿನಿಂದ ದುದ್ದಾ ಮೊಲಗೋಡು ಮಂಡಲ ಪಂಚಾಯತಿಯಲ್ಲಿ ಮೀಟಿಂಗ ಕರೆದಿಲ್ಲ. ಇವತ್ತು ಮಂತ್ರಿಗಳು ಇದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳುವುದಾದರೆ ಅದು ಸರಿಯಲ್ಲ. ರೋಜಗಾರ್ ಯೋಜನೆಯಲ್ಲಿ ಹಣವನ್ನು ಖರ್ಚು ಮಾಡುತ್ತಿಲ್ಲ ಕಚೇರಿ ಬಾಗಿಲು ಮುಚ್ಚಿದೆ ಅಲ್ಲಿರತಕ್ಕಂತಹ ಅಧಿಕಾರಿಗಳಿಗೆ ಸಂಬಳ ಕೊಡುತ್ತಿಲ್ಲ ಇದನ್ನು ಸದನದಲ್ಲಿ ಗಮನಕ್ಕೆ ತಂದು ವಿವರವನ್ನು ನಾವು ತಿಳಿದುಕೊಳ್ಳದೆ ಹೇಗೆ ನಾವು ಇಲ್ಲಿ ಕೆಲಸ ಮಾಡುವುದಕ್ಕಾಗುತ್ತದೆ ? ೩೦ ದಿವಸಕ್ಕಿಂತ ಮೊದಲೇ ನಾನು ಪ್ರಶ್ನೆ ಹಾಕಿದ್ದೇನೆ. ಇನ್ನೂ ಉತ್ತರ ಬಂದಿಲ್ಲವೆಂದರೆ ಜಿಲ್ಲಾ ಪರಿಷತ್ತಿನಲ್ಲಿ ಮಂಡಲ ಪಂಚಾಯತಿಯಲ್ಲಿ ಯಾವ ರೀತಿ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆಂದು ನಾವು ತಿಳಿದುಕೊಳ್ಳಬಹುದು.

ಅಧ್ಯಕ್ಷರು : ಇದರಲ್ಲಿ ಏನು ತೊಂದರೆ ಇದೆ ?

ಶ್ರೀ ಬಿ. ಶಿವರಾಮ್ : ಇದು ಬಹಳ ಸಿಂಪಲ್ ಪ್ರಶ್ನೆ. ಇದರಲ್ಲಿ ಹೆಚ್ಚು ಮಾಹಿತಿ ಕೊಡುವ ಅವಶ್ಯಕತೆ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರ ಕಳವಳ ನನಗೆ ಅರಿವಾಗಿದೆ ಈಗ ಪ್ರಶ್ನೆಗೆ ಉತ್ತರ ಒಂದಿಲ್ಲ ಉತ್ತರ ಬಾರದೇ ಇರುವುದರಿಂದ ತಮಗೆ ಉತ್ತರ ಒದಗಿಸಿಲ್ಲ. ಇದಕ್ಕೆ ಕಾರಣವನ್ನು ಹೇಳುವುದಕ್ಕೆ ಹೋದರೆ ತಮಗೆ ತೃಪ್ತಿಯಾಗುವುದಿಲ್ಲ. ಯಾವ್ಯಾವ ಅಧಿಕಾರಿಗಳು ಕರ್ತವ್ಯ ಲೋಪ ಮಾಡುತ್ತಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ನಾನು ಇದೇ ಮೊದಲನೆಯ ಸಲ ಉತ್ತರ ಬಂದಿಲ್ಲವೆಂದು ಹೇಳಿರುವುದು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

Mr. Speaker : I will hold it over

ಈ ಅಧಿವೇಶನದಲ್ಲಿ ನಿಮ್ಮ ಪ್ರಶ್ನೆ ಬರುವ ರೀತಿಯಲ್ಲಿ ಏರ್ಪಾಡು ಮಾಡೋಣ

ವಿಷಯ : ನೆಲಮಂಗಲ ಕ್ಷೇತ್ರದಲ್ಲಿರುವ ಪಶುವೈದ್ಯ ಶಾಲೆಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೨೦೬ (೬೮೧)

ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?